# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ.22/2018

ಚಾಸಾ-9 ಪ್ರಾಸಾ-6

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕ: 16.03.2020

| | | |
|---|---|---|
| ಹೆಸರು | ಃ | ಅಣ್ಣಪ್ಪ ಕುದರಿ |
| ತಂದೆ ಹೆಸರು | ಃ | ನಾಗಪ್ಪ |
| ವಯಸ್ಸು | ಃ | 58-ವರ್ಷ |
| ಉದ್ಯೋಗ | ಃ | ಸಹಾಯಕ ಅಭಿಯಂತರರು |
| ವಾಸಸ್ಥಳ | ಃ | ಕಾಳಗಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2010 ರಿಂದ 2017 ರವರೆಗೆ ಅಫಜಲಪೂರದ ಲೋ.ಇ. ಯಲ್ಲಿ ಸಹಾಯಕ ಇಂಜನಿಯರ್ ಎಂದು ಸೇವೆ ಸಲ್ಲಿಸಿದ್ದೇನೆ. ದಿನಾಂಕ 02.12.2016 ರಂದು ಜಿಲ್ಲಾಧಿಕಾರಿಗಳು ನಮಗೆ ಹಾಗೂ ಚಾಸಾ-4 ರವರಿಗೆ ನೀಡಿದ ಆದೇಶದ ಮೇರೆಗೆ ದಿನಾಂಕ 03.12.2016 ರಂದು ನಾನು, ಚಾಸಾ-1, 4, 11 ಹಾಗೂ ಇತರೆ ಸಿಬ್ಬಂದಿಗಳು ಸೇರಿ ಬನ್ನೆಟ್ಟಿ ಗ್ರಾಮದ 11 ಸರ್ವೆ ನಂಬರಗಳಿಗೆ ಭೇಟಿ ನೀಡಲಾಗಿ ಸದರಿ ಜಮೀನುಗಳಲ್ಲಿ ಅಕ್ರಮವಾಗಿ ಸಂಗ್ರಹ ಮಾಡಲಾಗಿತ್ತು. ಮರಳು ಸಂಗ್ರಹಿದ ಜಮೀನುಗಳ ಸರ್ವೆ ನಂಬರ ನೆನಪಿಲ್ಲ. ಸದರಿ ಸರ್ವೆ ನಂಬರಗಳಲ್ಲಿ ಸಂಗ್ರಹಿಸಿದ ಮರಳನ್ನು ಅಳತೆ ಮಾಡಿರುತ್ತೇನೆ. ಆ ಕುರಿತು ಚಾಸಾ-4 ರವರಿಗೆ ವರದಿ ನೀಡಿರುತ್ತೇನೆ. ಅಂದು ಅಳತೆ ಮಾಡಿದ ಅಕ್ರಮ ಮರಳು ಎಷ್ಟು ಇತ್ತು

ಎಂದು ಈಗ ನನಗೆ ನೆನಪಿಲ್ಲ. ಅಳತೆ ಮಾಡಿದ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 06.12.2016 ರಂದು ಪೋಲಿಸರಿಗೆ ಹೇಳಿಕೆ ನೀಡಿದ್ದು ಶಿವಪೂರ ಗ್ರಾಮದ ಸರ್ವೆ ನಂ.1/2, 1/3, 4/1/1, 4/1/7, 4/2/2, 5/4, 27/2, 31/6, 32/1, 34/1/3, 30/1 ರಲ್ಲಿ ಅಕ್ರಮವಾಗಿ ಮರಳನ್ನು ಸಂಗ್ರಹ ಮಾಡಿರುವ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ದಿನಾಂಕ 02.12.2016 ಸದರಿ ಮೇಲ್ಕಂಡ ಸರ್ವೆ ನಂಬರಗಳಿಗೆ ಭೇಟಿ ನೀಡಿರುತ್ತೇನೆ. ಸದರಿ ಜಮೀನುಗಳಲ್ಲಿ ಸಂಗ್ರಹಿಸಿ ಅಕ್ರಮ ಮರಳಿನ ಭಾವಚಿತ್ರ ತೆಗೆದಿಲ್ಲ. ಘಟನಾ ಸ್ಥಳದ ಚೆಕಬಂದಿ ಗೊತ್ತಿಲ್ಲ. ದಿನಾಂಕ 03.12.2016 ರಂದು ಅಳತೆ ಮಾಡಲು ಹೋಗಿದ್ದೆ ಎಂದು ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾನು ಅಳತೆ ಮಾಡಲು ಹೋದಾಗ ಸಿಬ್ಬಂದಿಗಳನ್ನು ಹೋರತುಪಡಿಸಿ ಜಮೀನುಗಳ ಮಾಲಿಕರಿರಲಿಲ್ಲ. ಅಳತೆ ಮಾಡಿದ ಜಮೀನುಗಳಲ್ಲಿ ಕಬ್ಬು, ತೊಗರಿಯಿತ್ತು.

ದಿನಾಂಕ 02.12.2016 ರಂದು ಜಿಲ್ಲಾಧಿಕಾರಿಗಳು ನಮಗೆ ಹಾಗೂ ಚಾಸಾ-4 ರವರಿಗೆ ನೀಡಿದ ಆದೇಶದ ಮೇರೆಗೆ ದಿನಾಂಕ 03.12.2016 ರಂದು ನಾನು, ಚಾಸಾ-1, 4, 11 ಹಾಗೂ ಇತರೆ ಸಿಬ್ಬಂದಿಗಳು ಸೇರಿ ಬನ್ನೆಟ್ಟಿ ಗ್ರಾಮದ 11 ಸರ್ವೆ ನಂಬರಗಳಿಗೆ ಭೇಟಿ ನೀಡಲಾಗಿ ಸದರಿ ಜಮೀನುಗಳಲ್ಲಿ ಅಕ್ರಮವಾಗಿ ಸಂಗ್ರಹ ಮಾಡಿದ್ದು ಸದರಿ ಸರ್ವೆ ನಂಬರಗಳಲ್ಲಿ ಸಂಗ್ರಹಿಸಿದ

ಮರಳನ್ನು ಅಳತೆ ಮಾಡಿ ಚಾಸಾ-4 ರವರಿಗೆ ವರದಿ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

<u>**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**</u>
<u>**ಅಫಜಲಪೂರ**</u>

ಸಿಸಿ ನಂ.22/2018

ಚಾಸಾ-1 ಪ್ರಾಸಾ-7

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕ: 16.03.2020

| | | |
|---|---|---|
| ಹೆಸರು | ಃ | ಲಕ್ಷ್ಮಿಕಾಂತ ಮಿತ್ರಾ |
| ತಂದೆ ಹೆಸರು | ಃ | ಜಯರಾಮ |
| ವಯಸ್ಸು | ಃ | 49-ವರ್ಷ |
| ಉದ್ಯೋಗ | ಃ | ಉಪ ಅಭಿವೃದ್ದಿ ಅಧಿಕಾರಿ |
| ವಾಸಸ್ಥಳ | ಃ | ಬೀದರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ದಿನಾಂಕ 11.07.2016 ರಿಂದ 28.09.2017 ರವರೆಗೆ ಅಫಜಲಪೂರದ ಲೋ.ಇ. ಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಯೆಂದು ಸೇವೆ ಸಲ್ಲಿಸಿದ್ದೇನೆ. ದಿನಾಂಕ 02.12.2016 ರಂದು ಜಿಲ್ಲಾಧಿಕಾರಿಗಳು, ಚಾಸಾ-4, 26, 12 ಹಾಗೂ ಇತರೆ ಸಿಬ್ಬಂದಿಗಳು ಸೇರಿ ಬನ್ನೆಟ್ಟಿ ಗ್ರಾಮಕ್ಕೆ ಭೇಟಿ ನೀಡಿದ್ದು ಆ ಗ್ರಾಮದ 11 ಸರ್ವೆ ನಂಬರಗಳಲ್ಲಿ ಈಗಾಗಲೇ ಗುನ್ನೆ ನಂ.178/2016 ರಲ್ಲಿ ಜಪ್ತಿಪಡಿಸಿಕೊಂಡ ಮರಳು ಕಳ್ಳತನವಾಗಿರುವುದು ಕಂಡುಬಂದಿತು. ನಂತರ ದಿನಾಂಕ 03.12.2016 ರಂದು ನಾನು, ಚಾಸಾ-9, ಕಂದಾಯ ಇಲಾಖೆಯ ಸಿಬ್ಬಂದಿಗಳು ಸೇರಿ ಸದರಿ ಜಪ್ತಿಪಡಿಸಿಕೊಂಡ ಮರಳನ್ನು ಅಳತೆ ಮಾಡಲಾಗಿ ಒಟ್ಟು 6831.85 ಕ್ಯೂಬಿಕ್ ಘಟ ಮೀಟರ ಇದ್ದು ಅದರಲ್ಲಿ 6678.35 ಘ.ಮೀ. ಮರಳು

ಕಳ್ಳತನವಾಗಿರುವು ಕಂಡುಬಂದಿತು. ನಂತರ ಅದೇ ದಿನ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ಸಾಕ್ಷಿ ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13, ಸಾಕ್ಷಿ ಸಹಿಯನ್ನು ನಿಪಿ-13 ಎ ಎಂದು ಗುರುತಿಸಲಾಯಿತು. ದಿನಾಂಕ 04.12.2016 ರಂದು ಅಸ್ರಪ ಪಟೇಲ ರವರ ಜಮೀನು ಸರ್ವೆ ನಂ.5/4 ರಲ್ಲಿ ಅಕ್ರಮವಾಗಿ ಮರಳು ಸಂಗ್ರಹಿಸಿಲ್ಲವೆಂದು ಪುರವಣಿ ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ಜಮಿನುಗಳಿಗೆ ಭೇಟೆ ನೀಡಿದಾಗ ಯಾವ ಬೆಳೆಗಳಿದ್ದವು ಎಂದು ಹೇಳಲಾಗುವುದಿಲ್ಲ. ಸದರಿ ಜಮೀನುಗಳು ಭೀಮಾ ನದಿಯ ದಂಡೆಯಲ್ಲಿರುವುದರಿಂದ ನೀರಾವರಿಯಾಗಿರುತ್ತವೆ ಎಂದರೆ ಸರಿ. ಸದರಿ ಜಮೀನುಗಳಿಗೆ ಭೇಟಿ ನೀಡಿದಾಗ ಅಲ್ಲಿ ಬೇರೆ ಯಾವುದೇ ಜನರು ಇರಲಿಲ್ಲ. ಸದರಿ ಜಮೀನುಗಳಲ್ಲಿದ್ದ ಮರಳನ್ನು ಯಾವ ಪ್ರಕರಣದಲ್ಲಿ ಜಪ್ತಿಪಡಿಸಿಕೊಡಿದ್ದೆವು ಎಂದು ಹೇಳಲಾಗುವುದಿಲ್ಲ. ಯಾವುದೇ ಜಮೀನುಗಳಿಗೆ ಭೇಟಿ ನೀಡಿದೇ ಕಚೇರಿಯಲ್ಲಿ ಕುಳಿತು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕಬಂದಿ ಹೇಳಲಾಗುವುದಿಲ್ಲ. ಆರೋಪಿತರಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.22/2018

ಚಾಸಾ-7 ಪ್ರಾಸಾ-8

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕ: 16.03.2020

| | | |
|---|---|---|
| ಹೆಸರು | ಃ | ಸಿದ್ದಪ್ಪ ಬಗಲೂರ |
| ತಂದೆ ಹೆಸರು | ಃ | ವಿಠಲ |
| ವಯಸ್ಸು | ಃ | 36-ವರ್ಷ |
| ಉದ್ಯೋಗ | ಃ | ಕಂದಾಯ ನಿರೀಕ್ಷಕರು |
| ವಾಸಸ್ಥಳ | ಃ | ಕರಜಗಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಏಪ್ರಿಲ್-2016 ರಿಂದ ಡಿಸೆಂಬರ್-2016 ರವರೆಗೆ ತಹಶೀಲ್ ಕಚೇರಿಯಲ್ಲಿ ಕಂದಾಯ ನಿರೀಕ್ಷಕನೆಂದು ಎಂದು ಸೇವೆ ಸಲ್ಲಿಸಿದ್ದೇನೆ. ದಿನಾಂಕ 02.12.2016 ರಂದು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನಾನು, ಲೋಕೊಪಯೋಗಿ ಸಿಬ್ಬಂದಿಗಳು ಹಾಗೂ ಪೋಲಿಸರು ಸೇರಿ ಶಿವಪೂರ-ಬನ್ನೆಟ್ಟಿ ಗ್ರಾಮದ ಸರ್ವೆ ನಂಬರಗಳಿಗೆ ಭೇಟಿ ನೀಡಲಾಗಿ ಸರ್ವೆ ನಂ.1/1, 1/3, 4/1, 5 ಹಾಗೂ ಇತರೆ ಸೇರಿ 15 ಸರ್ವೆ ನಂಬರಗಳಲ್ಲಿ ಅಕ್ರಮವಾಗಿ ಮರಳನ್ನು ಸಂಗ್ರಹಿಸಲಾಗಿತ್ತು. ಸದರಿ ಮರಳು ಬೇರೊಂದು ಪ್ರಕರಣದಲ್ಲಿ ಜಪ್ತಿ ಮಾಡಲಾಗಿದ್ದು, ನಾವು ನೋಡಿದಾಗ ಮರಳನ್ನು ಕಳ್ಳತನವಾಗಿದ್ದು ಕಂಡುಬಂದಿರುತ್ತದೆ. ಘಟನೆ ಕುರಿತು ಹೇಳಿಕೆ ನೀಡಿರುವುದಿಲ್ಲ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 06.12.2016 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಶಿವಪೂರ ಬನ್ನೆಟ್ಟಿ ಗ್ರಾಮದ ಸರ್ವೆ ನಂ.1/2, 1/3, 4/1/1, 4/1/7, 4/2/2, 5/4, 27/2, 31/6, 32/1, 34/1/3, 30/1 ರಲ್ಲಿ ಸಂಗ್ರಹ ಮಾಡಿದ್ದು ನಂತರ ಬೇರೊಂದು ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡಿದ್ದು, ಸಮಾರು 6678.35 ಘ.ಮಿ. ಮರಳನ್ನು ಕಳ್ಳತನ ಮಾಡಿರುವ ಬಗ್ಗೆ ಈಗ ಓದಿ ಹೇಳಲಾದ ನಿಪಿ-14 ರಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ